**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 632(767) |
| ಸದಸ್ಯರ ಹೆಸರು | ಶ್ರೀ ಮುನಿರಾಜುಗೌಡ ಪಿಎಂ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | ಕಂದಾಯ ಸಚಿವರು |
| ಉತ್ತರಿಸಬೇಕಾದ ದಿನಾಂಕ | 21.02.2024 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಇತ್ತೀಚೆಗೆ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ತಾಲ್ಲೂಕು ಕಛೇರಿಗಳಿಗೆ ಲೋಕಾಯುಕ್ತ ಅಧಿಕಾರಿಗಳು ತೆರಳಿದಾಗ ಅಧಿಕಾರಿ ಮತ್ತು ಸಿಬ್ಬಂದಿಗಳು ಕಾರ್ಯಾಲಯದಲ್ಲಿ ಹಾಜರಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಕಂದಾಯ ಇಲಾಖೆಯ ಗ್ರಾಮ ಹೋಬಳಿ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಸಕಾಲಕ್ಕೆ ಕಾರ್ಯಾಲಯಕ್ಕೆ ಹಾಜರಾಗ ದಿರುವುದರಿಂದ ಸಾರ್ವಜನಿಕರ ಕೆಲಸ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಸದರಿ ಅಧಿಕಾರಿ/ನೌಕರರು ಸಕಾಲಕ್ಕೆ ಆಗಮಿಸುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು; | ಸರ್ಕಾರದ ಸುತ್ತೋಲೆ ಸಂಖ್ಯೆ :ಸಿಆಸುಇ 29 ತಎಇ 2012 ದಿನಾಂಕ:04.09.2013ರನ್ವಯ ಸರ್ಕಾರದ ಎಲ್ಲಾ ಕಛೇರಿಗಳಲ್ಲಿ ಬಯೋಮೆಟ್ರಿಕ್ ಪದ್ಧತಿಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ನಿರ್ದೇಶನ ನೀಡಲಾಗಿದೆ **(ಅನುಬಂಧ-1).**<br><br>ಸರ್ಕಾರದ ಸುತ್ತೋಲೆ ಸಂಖ್ಯೆ: ಅ.ಸ.ಸಂಖ್ಯೆ: ಕಂಇ/ 206/ ಪ್ರಕಾ 2023, ದಿನಾಂಕ:21.09.2023 ರಲ್ಲಿ ಸರ್ಕಾರಿ ಕೆಲಸದ ನಿಮಿತ್ತ ಅಧಿಕಾರಿ / ನೌಕರರು ಕಛೇರಿಯಿಂದ ಹೊರಗಡೆ ಹೋಗಬೇಕಾದ ಸಂಧರ್ಭಗಳಲ್ಲಿ ಕಛೇರಿ ಮುಖ್ಯಸ್ಥರ ಅನುಮತಿಯನ್ನು ಪಡೆದು ಹಾಗೂ ಕಛೇರಿ ಸಿಬ್ಬಂದಿಗಳ ಚಲನ ವಲನ ನಿರ್ವಹಣೆಗಾಗಿ Movement Register ಅನ್ನು ನಿರ್ವಹಿಸಲು ನಿರ್ದೇಶಿಸಲಾಗಿದೆ **(ಅನುಬಂಧ-2).**<br><br>ಕಂದಾಯ ಇಲಾಖೆಯ ಗ್ರಾಮ ಹೋಬಳಿ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಸಕಾಲಕ್ಕೆ ಕಾರ್ಯಾಲಯಕ್ಕೆ ಹಾಜರಾಗದಿರುವುದರಿಂದ ಸಾರ್ವಜನಿಕರ ಕೆಲಸ ವಿಳಂಬವಾಗುತ್ತಿರುವ ಬಗ್ಗೆ ನಿರ್ದಿಷ್ಟ ದೂರುಗಳು ಬಂದಲ್ಲಿ, ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು. |
| ಇ) | ಕಂದಾಯ ಇಲಾಖೆಯ ಅಧಿಕಾರಿಗಳು/ ನೌಕರರ ಹಾಜರಾತಿ ಉತ್ತಮ ಪಡಿಸಲು ಬಯೋಮೆಟ್ರಿಕ್ ಹಾಜರಾತಿ ತರಲು ಸರ್ಕಾರ ಉದ್ದೇಶಿಸಿದರೆಯೇ; ಉದ್ದೇಶಿಸಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಬಯೋಮೆಟ್ರಿಕ್ ಹಾಜರಾತಿ ಜಾರಿ ತರಲಾಗುವುದು? | |

ಸಂಖ್ಯೆ: ಕಂಇ 69 ವಿಕೋವಿ 2024

**(ಕೃಷ್ಣ ಭೈರೇಗೌಡ)**
ಕಂದಾಯ ಸಚಿವರು

ಅನುಬಂಧ-1

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 29 ಸೇಅಇ 2012

ಕರ್ನಾಟಕ ಸರ್ಕಾರದ ಸಚಿವಾಲಯ,
ನೆಲ ಮಹಡಿ, 2ನೇ ಹಂತ,
ಕೊಠಡಿ ಸಂಖ್ಯೆ:607, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 04/09/2013.

ಸುತ್ತೋಲೆ

**ವಿಷಯ :** ಸಚಿವಾಲಯದಲ್ಲಿರುವಂತೆ ರಾಜ್ಯದ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ Bio-Metric ಹಾಜರಾತಿ ಪದ್ಧತಿಯನ್ನು ಅಳವಡಿಸುವ ಬಗ್ಗೆ

ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಈಗಾಗಲೇ ಸರ್ಕಾರಿ ಅಧಿಕಾರಿಗಳಿಗೆ/ನೌಕರರಿಗೆ ಹಾಜರಾತಿಯ ಪದ್ಧತಿಯನ್ನು ಬಯೋಮೆಟ್ರಿಕ್ ಮೂಲಕ ಅಳವಡಿಸಿರುವುದು ಸರಿಯಷ್ಟೆ. ಸದರಿ ಬಯೋಮೆಟ್ರಿಕ್ ಪದ್ಧತಿಯು ಇಲ್ಲದೇ ಇರುವ ಕಛೇರಿಯಲ್ಲಿ, ಅಧಿಕಾರಿ/ನೌಕರರ ಹಾಜರಾತಿಯಲ್ಲಿ ಏರುಪೇರು, ಕಛೇರಿಯ ಕಾರ್ಯನಿರ್ವಹಣೆಯಲ್ಲಿ ಹಾಗೂ ಶಿಸ್ತು ಪಾಲನೆಯಲ್ಲಿ ಕೊರತೆ ಕಂಡು ಬಂದಿರುತ್ತದೆ. ಆದ್ದರಿಂದ ಬಯೋಮೆಟ್ರಿಕ್ ಪದ್ಧತಿಯನ್ನು ಇತರ ಇಲಾಖೆಗಳಲ್ಲಿ ಅಳವಡಿಸುವಂತೆ ಕ್ರಮವಹಿಸಬೇಕಾಗಿರುವ ಅವಶ್ಯಕತೆಯನ್ನು ಮನಗಂಡಿದೆ.

ಹಾಗಾಗಿ ಸಚಿವಾಲಯದಲ್ಲಿರುವಂತೆಯೇ ರಾಜ್ಯದ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಬಯೋಮೆಟ್ರಿಕ್ ಅಳವಡಿಸುವುದನ್ನು ಜಾರಿಗೊಳಿಸಲು ಉದ್ದೇಶಿಸಿದ್ದು, ಈ ಕೆಳಕಂಡ ಸೂಚನೆಗಳನ್ನು ತಪ್ಪದೇ ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

1. ಬಯೋಮೆಟ್ರಿಕ್ ಪದ್ಧತಿಯನ್ನು ಎಲ್ಲಾ ಕಛೇರಿಗಳಲ್ಲಿ ದಿ: ನವೆಂಬರ್ 2013ರಿಂದ ಜಾರಿಗೆ ಬರುವಂತೆ ಕಡ್ಡಾಯವಾಗಿ ಅನುಷ್ಠಾನಿಸಲು ಕ್ರಮಕೈಗೊಳ್ಳುವುದು.
2. ಬಯೋಮೆಟ್ರಿಕ್ ಪದ್ಧತಿಯನ್ನು ಅಳವಡಿಸಲು ತಗಲುವ ವೆಚ್ಚವನ್ನು ಆಯಾ ಇಲಾಖೆಗೆ ನಿಗದಿಪಡಿಸಲಾದ ಆಯವ್ಯಯದಿಂದ ಭರಿಸುವುದು.
3. ಎಲ್ಲಾ ಇಲಾಖೆಗಳು ತಮ್ಮ ಸಿಬ್ಬಂದಿಗಳ ಸಂಖ್ಯೆಗಳಿಗನುಗುಣವಾಗಿ ರೀಡರ್‌ನ್ನು ಖರೀದಿಸತಕ್ಕದ್ದು. ಇದರೊಂದಿಗೆ ಗಣಕಯಂತ್ರ, ಅಂತರ್ಜಾಲ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಬೇಕಾಗುತ್ತದೆ. ಸದರಿ ಪರಿಕರಗಳನ್ನು ಇ-ಆಡಳಿತ ಇಲಾಖೆಯು ಗುರುತಿಸಿರುವ ಮಾರಾಟಗಾರರಿಂದ (empanelled vendors) ಖರೀದಿಸತಕ್ಕದ್ದು.
4. ಸದರಿ ಬಯೋಮೆಟ್ರಿಕ್ ಉಪಕರಣಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಕಾಯ್ದೆಯನ್ನು ಪಾಲಿಸತಕ್ಕದ್ದು.
5. ಇದಕ್ಕೆ ಬೇಕಾಗುವ ತಂತ್ರಾಂಶವನ್ನು NIC/e-Governance ಇಲಾಖೆಯವರಿಂದ ಪಡೆಯತಕ್ಕದ್ದು. ಬಯೋಮೆಟ್ರಿಕ್ ಪದ್ಧತಿಯನ್ನು ತಮ್ಮ ಕಛೇರಿಗಳಲ್ಲಿ ಅನುಷ್ಠಾನಗೊಳಿಸಲು ಸಿಸ್ಟಂ ಅನಾಲಿಸ್ಟ್ ಹಾಗೂ ಪ್ರೋಗ್ರಾಮರ್ ಸೇವೆಯನ್ನು ತಾತ್ಕಾಲಿಕವಾಗಿ ಸಿಆಸುಇ ಇ-ಆಡಳಿತ ಇಲಾಖೆಯ ಮೂಲಕ ಪಡೆಯಲು ಇಲಾಖೆಗಳಿಗೆ ತಿಳಿಸಲಾಗಿದೆ.

(ಡಾ: ಶಾಲಿನಿ ರಜನೀಶ್)
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ)
(ನಾಗರೀಕ ಸೇವೆಗಳು ಮತ್ತು ರಾಜಕೀಯ ವಿಶ್ರಾಂತಿ ವೇತನ-2)

ಇವರಿಗೆ:
ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ,

ಪ್ರತಿ
1. ಸರ್ಕಾರದ ಪ್ರಧಾನ ಕಾರ್ಯದರ್ಶಿ ಸಿಆಸುಇ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ.

4. ಅಪರ ಮಿಷನ್ ನಿರ್ದೇಶಕರು, ಸಕಾಲ ಮಿಷನ್, ಬಹುಮಹಡಿ (ತಮ) [illegible] ಕಟ್ಟಡ, ಬೆಂಗಳೂರು
5. ನಿರ್ದೇಶಕರು, ಜಿಲ್ಲಾ ಖಜಾನೆ, ಬೆಂಗಳೂರು.
6. ಸಹ ನಿರ್ದೇಶಕರು ರಾಜ್ಯ ಹುಜೂರ್ ಖಜಾನೆ ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-೮, ವಿಧಾನಸೌಧ, ಬೆಂಗಳೂರು
8. ರಾಜ್ಯ ಮಾಹಿತಿ ತಂತ್ರಜ್ಞಾನ ಸಮಾಲೋಚಕರು, ಕೊಠಡಿ ಸಂಖ್ಯೆ ಬಹುಮಹಡಿ ಕಟ್ಟಡ, ಬೆಂಗಳೂರು
9. ಸರ್ಕಾರದ ಜಂಟಿ ಕಾರ್ಯದರ್ಶಿಗಳು ಅವರ ಆಪ್ತ ಕಾರ್ಯದರ್ಶಿ
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಅನುಬಂಧ-2


ರಾಜೇಂದರ್ ಕುಮಾರ್ ಕಟಾರಿಯಾ, ಭಾಆಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ

Rajender Kumar Kataria, I.A.S.
Principal Secretary to Government
Revenue Department


ಕಂಇ ಸಂಖ್ಯೆ: ಕಂಇ 206 ಮುಕಾ 2023 ದಿನಾಂಕ: 21.09.2023

## ಸುತ್ತೋಲೆ

ಕರ್ನಾಟಕ ರಾಜ್ಯವ್ಯಾಪ್ತಿ ಪ್ರಾದೇಶಿಕ ಆಯುಕ್ತರು/ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ/ತಹಶೀಲ್ದಾರ್ ಕಛೇರಿ ಮತ್ತು ಕಂದಾಯ ಇಲಾಖೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಸರ್ಕಾರಿ ನೌಕರರು ನಿಗದಿತ ವೇಳೆಗೆ ಕಛೇರಿಗೆ ಹಾಜರಾಗದೇ, ಸರ್ಕಾರಿ ಕೆಲಸದ ಸಮಯದಲ್ಲಿ ತಮ್ಮ ಆಸನದಲ್ಲಿಲ್ಲದೇ ಸರ್ಕಾರಿ ಕೆಲಸಗಳು ಸಮರ್ಪಕವಾಗಿ ನಿರ್ವಹಣೆಯಾಗದಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು, ಈ ಸಂಬಂಧ ಸರ್ಕಾರದಲ್ಲಿ ದೂರುಗಳು ಸ್ವೀಕೃತಗೊಳ್ಳುತ್ತಿವೆ.

ಈ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುವ ರಾಜ್ಯದ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಸರ್ಕಾರಿ ಅಧಿಕಾರಿ/ನೌಕರರು ಬೆಳಿಗ್ಗೆ 10:15 ಗಂಟೆಯೊಳಗೆ ಹಾಜರಿರತಕ್ಕದ್ದು, ಸರ್ಕಾರಿ ಕೆಲಸದ ವೇಳೆಯಲ್ಲಿ ಕಛೇರಿ ಬಿಟ್ಟು ಬೇರೆ ಕಾರ್ಯಗಳ ನಿಮಿತ್ತ ಕಾಲಹರಣ ಮಾಡದೇ ಕಛೇರಿಯಲ್ಲಿನ ಕಡತಗಳು ವಿಲೇಗೊಳ್ಳುವ ನಿಟ್ಟಿನಲ್ಲಿ ಕ್ರಮವಹಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು. ಒಂದು ವೇಳೆ ಸರ್ಕಾರಿ ಕೆಲಸದ ನಿಮಿತ್ತ ಕಛೇರಿಯಿಂದ ಹೊರಗಡೆ ತೆರಳಬೇಕಾದ ಸಂದರ್ಭದಲ್ಲಿ ಕಛೇರಿ ಮುಖ್ಯಸ್ಥರ ಅನುಮತಿ ಪಡೆದು ಹೋಗತಕ್ಕದ್ದು. ಈ ರೀತಿ ಕಛೇರಿ ಸಿಬ್ಬಂದಿಗಳ ಚಲನವಲನ ನಿರ್ವಹಣೆಗಾಗಿ Movement Register ಅನ್ನು ನಿರ್ವಹಿಸಿ ಸದರಿ ರಿಜಿಸ್ಟರ್‌ನಲ್ಲಿ ಅಧಿಕಾರಿ/ಸಿಬ್ಬಂದಿಗಳು ಕಛೇರಿಯಿಂದ ಹೊರಗಡೆ ತೆರಳಿದ ಮತ್ತು ಕಛೇರಿಗೆ ಮರಳಿದ ಸಮಯಗಳನ್ನು ಕಡ್ಡಾಯವಾಗಿ ನಮೂದಿಸುವುದು.

ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಆಡಳಿತ ಅಧಿಕಾರಿಯವರುಗಳು ತಮಗೆ ನಿಯುಕ್ತಿಗೊಳಿಸಿರುವ ಹೋಬಳಿ/ವೃತ್ತಗಳಲ್ಲಿ ಕಡ್ಡಾಯವಾಗಿ ಇದ್ದು, ಸಾರ್ವಜನಿಕರಿಗೆ ಲಭ್ಯವಾಗತಕ್ಕದ್ದು ಹಾಗೂ ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕ್ರಮವಹಿಸಲು ಅಗತ್ಯ ಕ್ರಮವಹಿಸುವಂತೆ ಸೂಚಿಸಿದೆ.

ಈ ಮೇಲ್ಕಾಣಿಸಿದ ಸೂಚನೆಗಳನ್ನು ಪಾಲಿಸಲು ವಿಫಲರಾದ ಅಧಿಕಾರಿ/ನೌಕರರ ಶಿಸ್ತುಕ್ರಮ ಕೈಗೊಳ್ಳಲಾಗುವುದು.

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ

ಗೆ,

ಪ್ರಾದೇಶಿಕ ಆಯುಕ್ತರು, [illegible]